*

**ಓಎಸ್ ನಂಃ 3/2021**

**ಪಿಡಬ್ಲೂಃ 3**

**<u>ಸಾಕ್ಷಿಗೆ ದಿನಾಂಕ 03-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಮ್.ವಿ.ಎಲ್ ವಕೀಲರಿಂದ</u>

ನೀವು ಈ ಮೊದಲು ಬೇರೆ ಒಂದು ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿ. ನೀವು ಈಗ ಚಿತ್ತಾಪುರದ ನಿವಾಸಿ ಎಂದರೆ ಸಾಕ್ಷಿ ನಾನು ಕಮರವಾಡಿ ಗ್ರಾಮದ ನಿವಾಸಿ ಎಂದು ನುಡಿಯತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿ ಯಾವಾಗ ಖರೀದಿ ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಲು ಪ್ರತಿವಾದಿಗೆ ರೂ.20,000/- ಹಣ ನೀಡಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿಯ ತಂದೆ ತೀರಿಕೊಂಡಾಗ ವಾದಿಯ ವಯಸ್ಸು ಎಷ್ಟು ಇತ್ತು ಎಂದರೆ ಸಾಕ್ಷಿ ಸುಮಾರು 15 ರಿಂದ 16 ವರ್ಷ ಇರಬಹುದೆಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದ 2 ರಿಂದ 6ನೇ ಖಂಡಿಕೆಗಳಲ್ಲಿ ಬರೆದಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆಯು ವಾದಿಯ ತಂದೆ ಅಥವಾ ವಾದಿಯ ಬಳಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ ಖರೀದಿ ಮಾಡಿದ ನಂತರ ಪ್ರತಿವಾದಿಯೇ ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ತಂದೆಗೆ ಯಾವುದೇ ಛಾಪಾ ಕಾಗದದ ಮೇಲೆ ಸಹಿ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಮಗೆ ವಾದಿ ಮತ್ತು ಪ್ರತಿವಾದಿ ಕುಟುಂಬದ ಕುರಿತು ಯಾವುದೇ ಮಾಹಿತಿ ಇಲ್ಲ, ನೀವು ವಾದಿಯ ಮಾತನ್ನು ಕೇಳಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.